ಸಾಕ್ಷಿಯನ್ನು ದಿ: 26.06.2024 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-2

**ಪಾಟೀಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ ಃ-**

1. ನಾನು ಡಿಗ್ರಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ವ್ಯವಸಾಯ ಮಾಡಿಕೊಂಡಿರುತ್ತೇನೆ. ಕನ್ನಡ ಓದಲು ಬರೆಯಲು ಬರುತ್ತದೆ. ಸಾಕ್ಷಿ ಹೇಳಲು ಸಮನ್ಸು ನ್ಯಾಯಾಲಯದಿಂದ ಜಾರಿಯಾಗಿರುವುದಿಲ್ಲ. ಪ್ರಾಮಿಸರಿಪತ್ರವನ್ನು ರಿಜಿಸ್ಟರ್ ಕಛೇರಿ ಒಳಗೆ ಬರೆದಿರುತ್ತೇನೆ. ಕಛೇರಿ ಒಳಗೆ ಸಾಮಾನ್ಯ ಜನರು ಹಾಜರಿದ್ದರು. ಕಛೇರಿ ಒಳಗೆ ಪ್ರಾಮಿಸರಿ ನೋಟು ಬರೆಸಲು ಪ್ರತಿವಾದಿ ಸುಮಾರು 1-1.15 ಸಮಯದಲ್ಲಿ ಬಂದಿದ್ದರು. ಕಛೇರಿಗೆ ಹೋಗವ ಮೊದಲು ಪ್ರತಿವಾದಿಯು ಕಛೇರಿಯಲ್ಲಿ ಹಾಜರಿದ್ದರು. ಶಿವನಂಜೆಗೌಡರು ಮಳವಳ್ಳಿ ಅನುಷ ಮೆಡಿಕಲ್ ಬಳಿ ಇದ್ದು ಇಬ್ಬರು ಜೊತೆಗೆ ಕಛೇರಿಗೆ ಹೋಗಿರುತ್ತೇವೆ.

2. ಪ್ರತಿವಾದಿಯು ಮೆಡಿಕಲ್ ಸ್ಟೋರ್ ಬಳಿ ಭೇಟಿಯಾಗಿದ್ದರು. ಆ ಸಮಯದಲ್ಲಿ ನಾನು ಮತ್ತು ಶಿವನಂಜೆಗೌಡರು ಜೊತೆಗೆ ಇದ್ದೆವು ಆಗ ಸಮಯ 12.15 ಆಗಿತ್ತು. ಸಬ್ ರಿಜಿಸ್ಟರ್ ಆಫಿಸಿನಿಂದ ಅನುಷ ಮೆಡಿಕಲ್ ಗೆ ಎಷ್ಟು ಅಂತರ ಇರುತ್ತದೆ ಗೊತ್ತಿಲ್ಲ. ನಾವು ಹೋಗುವ ಮೊದಲು ಬಿಕ್ಲಂದಾರರು , ಪ್ರತಿವಾದಿ , ಪಿ ರಾಜು ಕಛೇರಿಯಲ್ಲಿ ಹಾಜರಿದ್ದರು. ದಿಃ 8.11.2011 ರಂದು ಕಛೇರಿಯಲ್ಲಿ ನಾವುಗಳು ಹಾಜರಿದ್ದೆವು. ಕಛೇರಿ ಒಳಗೆ ಸಾಮಾನ್ಯ ಜನರು ಹಾಜರಿದ್ದು ಜನಸಂದಣಿ ಇರುತ್ತದೆ ಎಂದರೆ ಸರಿ.

3. ಶಿವನಂಜೆಗೌಡರನ್ನು ಯಾರೂ ಕರೆದಿರುವುದಿಲ್ಲ ನಾವಿಬ್ಬರೆ ಜೊತೆಗೆ ಕಛೇರಿಗೆ ಹೋಗಿರುತ್ತೇವೆ. ಸದರಿ ಶಿವನಂಜೆಗೌಡ ಮತ್ತು ವಾದಿ ನಮ್ಮ ಗ್ರಾಮಸ್ಥರು. ವಾದಿ ಶಿವನಂಜೆಗೌಡರು ಮತ್ತು ನಾನು ಸುಮಾರು 10 ವರ್ಷದಿಂದ ಸ್ನೇಹಿತರಾಗಿರುತ್ತೇವೆ. ನಿಪಿ 1 ನ್ನು ಪ್ರತಿವಾದಿಗಳು ತಂದಿರುತ್ತಾರೆ. ನಿಪಿ 1 ನ್ನು ಸಿದ್ದರಾಜುರವರಿಂದ ತಂದಿರುತ್ತಾರೆ. ನಿಪಿ 1 ಸಿದ್ದರಾಜು ಬರೆದಿರುತ್ತಾರೆ. ನಿಪಿ 1 ನ್ನು ಯಾವ ಸಮಯದಲ್ಲಿ ಬರೆದಿರುತ್ತಾರೆ ಗೊತ್ತಿಲ್ಲ. ನಿಪಿ 1 ಕ್ಕೆ ಸ್ಟಾಂಪ್ ಮುಂಚೆನೆ ಹಚ್ಚಿದ್ದು ಅದರಲ್ಲಿ ಎಲ್ಲ ಅಂಶಗಳು ಬರೆದಿತ್ತು. ನನ್ನ ಮುಂದೆ ಯಾವುದೆ ಬರವಣಿಗೆ ಆಗಿರುವುದಿಲ್ಲ. ಹಣಕಾಸಿನ ವ್ಯವಹಾರ ನನ್ನ ಮುಂದೆ ನಡೆದಿರುತ್ತದೆ. ಸದರಿ ಸಮಯದಲ್ಲಿ 80 ಸಾವಿರ ವನ್ನು ವಾದಿಯವರು ಪ್ರತಿವಾದಿಗೆ ನೀಡಿರುತ್ತಾರೆ. ಸದರಿ ಹಣವನ್ನು 1 – 1.15 ಸಮಯದಲ್ಲಿ ನೀಡಿರುತ್ತಾರೆ. ಎಲ್ಲ

ವ್ಯವಹಾರವು ಸಬ್ ರಿಜಿಸ್ಟರ್ ಆಫಿಸಲ್ಲಿ 2 ಗಂಟೆಗೆ ಮುಗಿದಿರುತ್ತದೆ. ನಿಪಿ 1ನ್ನು ಬರೆದಿರುವ ಬಗ್ಗೆ ಬಿಕ್ಲಂದಾರರು ಯಾವುದೆ ರಿಜಿಸ್ಟರಲ್ಲಿ ನಮೂದು ಮಾಡಿರುವುದಿಲ್ಲ. ನನ್ನ ಮುಂದೆ ಯಾವುದೆ ವ್ಯವಹಾರ ನಡೆದಿಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಪ್ರಮಾಣ ಪತ್ರವನ್ನು ಸಬ್ ರಿಜಿಸ್ಟರು ಕಛೇರಿ ಒಳಗೆ ಬರೆಸಿರುತ್ತೇನೆ. ಮಾಹಿತಿಯನ್ನು ನಾನೆ ಕೊಟ್ಟಿರುತ್ತೇನೆ. ಪ್ರಮಾಣ ಪತ್ರದಲ್ಲಿ ಇರುವ ವಿಷಯ ಗೊತ್ತಿರುತ್ತದೆ. ವಾದಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

1ನೇ ಅಪರ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ
ಮಳವಳ್ಳಿ.